159ನೇ session ದಿ: 20-08-26 ಪ್ರ. ಸಂ. - 22

# ಕರ್ನಾಟಕ ವಿಧಾನ ಪರಿಷತ್ತು

## ಶ್ರೀ ಪಿ.ವಿ. ಮೋಹನ್, ಮಾನ್ಯ ವಿಧಾನ ಪರಿಷತ್ ಸದಸ್ಯರು ಇವರು ಶೂನ್ಯವೇಳೆಯಲ್ಲಿ ಪ್ರಸ್ತಾಪಿಸಿರುವ ವಿಷಯ ಕುರಿತು

**ವಿಷಯ:** ಎಲ್ ನಿನೋ-ಲಾ ನಿನಾ ಸೇರಿದಂತೆ ಹವಾಮಾನ ವೈಪರೀತ್ಯದ ಹಿನ್ನೆಲೆಯಲ್ಲಿ ಕರಾವಳಿ ಕರ್ನಾಟಕದಲ್ಲಿ ಉಳಿದ ಮಳೆನೀರನ್ನು ಸಂರಕ್ಷಿಸಿ, ಅಂತರ್ಜಲ ಮರುಪೂರಣಕ್ಕೆ ತುರ್ತು ಕ್ರಮ ಕೈಗೊಳ್ಳುವ ಕುರಿತು.

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಕರ್ನಾಟಕದ ಕರಾವಳಿ ಎಂದರೆ ನಮಗೆ ಮೊದಲು ನೆನಪಾಗುವುದು ಮಳೆ. ಆದರೆ ಈ ವರ್ಷ ಇದೇ ಮಲೆನಾಡಿನಲ್ಲಿ ಬೇಸಿಗೆಯ ಕುಡಿಯುವ ನೀರಿನ ಬಗ್ಗೆ ಈಗಲೇ ಆತಂಕ ಮೂಡುತ್ತಿದೆ. ಇದು ಸಾಮಾನ್ಯವಾಗಿ ಕಾಣುವ ಹವಾಮಾನ ಬದಲಾವಣೆಯಲ್ಲ; ಮಳೆ ಬೀಳುವ ಪ್ರಮಾಣಕ್ಕಿಂತ ಮಳೆ ಬೀಳುವ ರೀತಿಯೇ ಬದಲಾಗುತ್ತಿರುವ ಸೂಚನೆ ಎಂದು ಇದನ್ನು ಗಂಭೀರವಾಗಿ ಪರಿಗಣಿಸಬೇಕಾಗಿದೆ. ಸಾಮಾನ್ಯವಾಗಿ ಕರಾವಳಿಯಲ್ಲಿ ಮೇ ತಿಂಗಳಲ್ಲೇ ಮುಂಗಾರು ಪೂರ್ವದ ಮಳೆಯ ಚಟುವಟಿಕೆ ಆರಂಭವಾಗಿ, ಜೂನ್‌ನಲ್ಲಿ ಮುಂಗಾರು ವ್ಯಾಪಕವಾಗಿ ಆವರಿಸುತ್ತದೆ. ಈ ಬಾರಿ ಮಳೆಯ ಆರಂಭ ಮತ್ತು ಹಂಚಿಕೆಯಲ್ಲಿ ವ್ಯತ್ಯಾಸ ಕಂಡುಬಂದಿದೆ. ಜೂನ್‌ನಲ್ಲಿ ಮಳೆ ತಡವಾಗಿ ಆರಂಭಗೊಂಡಿತು. ಜುಲೈ ಮಧ್ಯಭಾಗದಲ್ಲಿ ಮಳೆ ಚುರುಕಾದರೂ, ಒಟ್ಟಾರೆ ಮಳೆಯ ಹಂಚಿಕೆ ಸಮಾನವಾಗಿಲ್ಲ.

ಎಲ್ ನಿನೋ ಮತ್ತು ಲಾ ನಿನಾ ಸೇರಿದಂತೆ ಜಾಗತಿಕ ಹವಾಮಾನ ವಿದ್ಯಮಾನಗಳು ಮುಂಗಾರು ಮಳೆ, ಉಷ್ಣಾಂಶ ಮತ್ತು ಸಮುದ್ರದ ಪರಿಸ್ಥಿತಿಗಳ ಮೇಲೆ ಪರಿಣಾಮ ಬೀರುತ್ತವೆ. ಎಲ್ ನಿನೋ ಸಂದರ್ಭದಲ್ಲಿ ಭಾರತದ ಮುಂಗಾರು ದುರ್ಬಲವಾಗುವ ಸಾಧ್ಯತೆ ಇದ್ದರೆ, ಲಾ ನಿನಾ ಅವಧಿಯಲ್ಲಿ ಮುಂಗಾರು ಹೆಚ್ಚು ಸಕ್ರಿಯವಾಗುವ ಸಾಧ್ಯತೆ ಇದೆ. ಆದರೆ ಇದರ ಪರಿಣಾಮ ಪ್ರತಿವರ್ಷವೂ ಒಂದೇ ರೀತಿಯಾಗಿರುತ್ತದೆ ಎಂದು ಹೇಳಲಾಗದು. ಕೆಲವೆಡೆ ಭಾರಿ ಮಳೆ, ಮತ್ತೊಂದೆಡೆ ಕಡಿಮೆ ಮಳೆ; ಕೆಲವೇ ದಿನಗಳಲ್ಲಿ ಅಪಾರ ನೀರು, ನಂತರ ದೀರ್ಘ ವಿರಾಮ ಈ ರೀತಿಯ ಅಸಮತೋಲನವೇ ಮುಂದಿನ ದಿನಗಳ ದೊಡ್ಡ ಸವಾಲಾಗಬಹುದು. ಕರಾವಳಿಯ ಭೌಗೋಳಿಕ ಸ್ವರೂಪದಿಂದಾಗಿ ಭಾರಿ ಮಳೆಯ ಸಂದರ್ಭದಲ್ಲಿ ಅಪಾರ ಪ್ರಮಾಣದ ನೀರು ನದಿಗಳು ಮತ್ತು ತೊರೆಗಳ ಮೂಲಕ ವೇಗವಾಗಿ ಸಮುದ್ರ ಸೇರುತ್ತದೆ. ಮಳೆಗಾಲದಲ್ಲಿ ನೀರು ಹೆಚ್ಚಿದ್ದರೂ, ಬೇಸಿಗೆಯಲ್ಲಿ ಬಾವಿಗಳು ಬತ್ತುವುದು, ಅಂತರ್ಜಲ ಮಟ್ಟ ಕುಸಿಯುವುದು ಮತ್ತು ಕುಡಿಯುವ ನೀರಿನ ಸಮಸ್ಯೆ ಎದುರಾಗುತ್ತಿದ್ದು, ಹಾಗೂ ಉಳಿದ ಮುಂಗಾರು ಮಳೆಯ ಪ್ರತಿಯೊಂದು ಹನಿಯನ್ನೂ ಮುಂದಿನ ಬೇಸಿಗೆಯ ನೀರಿನ ಭದ್ರತೆಗಾಗಿ ಪರಿವರ್ತಿಸುವ "ಸಮಗ್ರ ಕರಾವಳಿ ಜಲಸಂರಕ್ಷಣಾ ಕಾರ್ಯಯೋಜನೆಯನ್ನು" ಕೂಡಲೇ ಜಾರಿಗೆ ತರುವ ವಿಷಯವನ್ನು ಸರ್ಕಾರವು ಗಂಭೀರವಾಗಿ ಪರಿಗಣಿಸಿ, ಈ ಸಮಸ್ಯೆಗಳನ್ನು ಪರಿಹರಿಸಿ ಸೂಕ್ತ ಕ್ರಮಕೈಗೊಳ್ಳಬೇಕೆಂದು ಸರ್ಕಾರಕ್ಕೆ ಈ ಶೂನ್ಯ ವೇಳೆಯಲ್ಲಿ ಒತ್ತಾಯಿಸುತ್ತೇನೆ.

**ಉತ್ತರ:**

ಕರಾವಳಿ ಕರ್ನಾಟಕವು ಪಶ್ಚಿಮ ಘಟ್ಟಗಳಿಂದ ಕೂಡಿದ್ದು, ನೈಸು, ಗ್ರಾನೈಟ್, ಮತ್ತು ಲ್ಯಾಟರೈಟ್ ಶಿಲಾ ರಚನೆಗಳಿಂದ ಕೂಡಿದ ಪ್ರದೇಶವಾಗಿರುತ್ತದೆ. ರಾಜ್ಯದಲ್ಲಿ ಅಂತರ್ಜಲ ನಿರ್ದೇಶನಾಲಯವು ಅಂತರ್ಜಲ ಸ್ಥಿರ ಮಟ್ಟವನ್ನು ಮಾಪನ ಮಾಡಲು ಅಧ್ಯಯನ ತೊಡುಬಾವಿ ಹಾಗೂ ಕೊಳವೆಬಾವಿಗಳನ್ನು ನಿರ್ಮಿಸಿದ್ದು, ಪ್ರತಿ ತಿಂಗಳು ಅಂತರ್ಜಲ ಮಟ್ಟವನ್ನು ದಾಖಲಿಸುತ್ತಿದೆ.

ಪ್ರಸ್ತುತ ಸಾಲಿನ ಜುಲೈ-2026 ರ ಅಂತರ್ಜಲ ಸ್ಥಿರ ಮಟ್ಟವನ್ನು ಕಳೆದ ವರ್ಷದ ಜುಲೈ-2025ರೊಂದಿಗೆ ಹೋಲಿಸಿದಾಗ ಸರಾಸರಿ ಅಂತರ್ಜಲ ಸ್ಥಿರ ಮಟ್ಟದಲ್ಲಿ ಒಟ್ಟು 03 ತಾಲೂಕುಗಳಲ್ಲಿ ಏರಿಕೆ ಕಂಡುಬಂದಿರುತ್ತದೆ. ಏರಿಕೆಯು 0.56 ಮೀ ರಿಂದ 1.83 ಮೀ ಇರುತ್ತದೆ. ಹಾಗೂ 25 ತಾಲೂಕುಗಳಲ್ಲಿ ಅಂತರ್ಜಲ ಸ್ಥಿರ ಮಟ್ಟವು ಇಳಿಕೆ ಕಂಡುಬಂದಿರುತ್ತದೆ. ಗರಿಷ್ಠ 10.32 ಮೀ. ರಷ್ಟು ಇಳಿಕೆ ಪ್ರಮಾಣ ಬರುತ್ತದೆ. ಮಾಹಿತಿಯನ್ನು ಅನುಬಂಧ-1 ರಲ್ಲಿ ಲಗತ್ತಿಸಿದೆ.

ಕಳೆದ 10 ವರ್ಷಗಳ ಸರಾಸರಿ ಅಂತರ್ಜಲ ಸ್ಥಿರ ಮಟ್ಟದೊಂದಿಗೆ ಹೋಲಿಸಿದಾಗ ಒಟ್ಟು 07 ತಾಲೂಕುಗಳಲ್ಲಿ ಅಂತರ್ಜಲ ಮಟ್ಟ ಏರಿಕೆಯಾಗಿದ್ದು, ಹಾಗೂ 21 ತಾಲೂಕುಗಳಲ್ಲಿ ಅಂತರ್ಜಲ ಮಟ್ಟ ಇಳಿಕೆಯಾಗಿರುತ್ತದೆ. ಮಾಹಿತಿಯನ್ನು ಅನುಬಂಧ-2 ರಲ್ಲಿ ಲಗತ್ತಿಸಿದೆ.

ಅಂತರ್ಜಲ ನಿರ್ದೇಶನಾಲಯವು ವಾರ್ಷಿಕವಾಗಿ ಅಂತರ್ಜಲ ಸಂಪನ್ಮೂಲ ಮೌಲ್ಯಮಾಪನ (Groundwater Resource Estimation) ತಾಲೂಕುವಾರು ಕೈಗೊಳ್ಳಲಾಗುತ್ತಿದೆ. 2025 ನೇ ಸಾಲಿನ ಅಂತರ್ಜಲ ಮೌಲ್ಯಮಾಪನದ ವರದಿಯನುಸಾರ 03 ಜಿಲ್ಲೆಗಳ ಎಲ್ಲಾ ತಾಲೂಕುಗಳು ಅಂತರ್ಜಲ ಬಳಕೆಯ ಸುರಕ್ಷಿತ ವಲಯಗಳೆಂದು ವರ್ಗೀಕರಿಸಲಾಗಿರುತ್ತದೆ. ಅಂತರ್ಜಲ ಬಳಕೆಯ ಹಂತವು ಶೇ. 36.58 ಯಾಗಿದ್ದು, ಕಳೆದ ವರ್ಷ 2024 ಫಲಿತಾಂಶಕ್ಕೆ ಹೋಲಿಸಿದಾಗ ಅಂತರ್ಜಲ ಬಳಕೆಯು ಶೇ. 0.97 ರಷ್ಟು ಕಡಿಮೆಯಾಗಿರುತ್ತದೆ. ಮಾಹಿತಿಯನ್ನು ಅನುಬಂಧ-3 ರಲ್ಲಿ ಲಗತ್ತಿಸಿದೆ.

ಒಟ್ಟಾರೆ ಕರಾವಳಿ ಜಿಲ್ಲೆಗಳಲ್ಲಿ ಸರಾಸರಿ ವಾಡಿಕೆ ಮಳೆ ಪ್ರಮಾಣಕ್ಕಿಂತ ಹೆಚ್ಚು ಮಳೆಯಾಗುತ್ತಿದ್ದು, ಗುಡ್ಡಗಾಡು ಪ್ರದೇಶವಾಗಿರುವುದರಿಂದ ಮಳೆನೀರು ರಭಸವಾಗಿ ಹರಿದು ಸಮುದ್ರ ಸೇರುತ್ತದೆ. ಈ ಹಿನ್ನೆಲೆಯಲ್ಲಿ ಮಳೆನೀರು ಇಂಗುವಿಕೆ ಪ್ರಮಾಣ ಕಡಿಮೆಯಾಗುತ್ತದೆ. ಕರಾವಳಿ ಪ್ರದೇಶಗಳು (Laterite) ಲ್ಯಾಟರೈಟ್ ಶಿಲಾ ರಚನೆಯನ್ನು ಹೊಂದಿದ್ದು, ಮಳೆಗಾಲದಲ್ಲಿ ರಭಸವಾಗಿ ಅಂತರ್ಜಲ ಮಟ್ಟವು ವೃದ್ಧಿಯಾಗುತ್ತದೆ. ಕ್ರಮೇಣ ಅಷ್ಟೇ ರಭಸವಾಗಿ ಅಂತರ್ಜಲ ಮಟ್ಟದಲ್ಲಿ ಕುಸಿತವಾಗುತ್ತದೆ. ಈ ಹಿನ್ನೆಲೆಯಲ್ಲಿ ಬೇಸಿಗೆ ಕಾಲದಲ್ಲಿ ನೀರಿಗೆ ತೊಂದರೆಯಾಗುತ್ತಿರುವುದನ್ನು ಗಮನಿಸಲಾಗಿರುತ್ತದೆ.

ಕರಾವಳಿ ಜಿಲ್ಲೆಗಳ ಭೌಗೋಳಿಕ ಪರಿಸ್ಥಿತಿ ಹಿನ್ನೆಲೆಯಲ್ಲಿ ಹಾಗೂ ಮಣ್ಣಿನ ಗುಣಲಕ್ಷಣಗಳಿಂದಾಗಿ ಬೃಹತ್ ಅಣೆಕಟ್ಟು ಮತ್ತು ಇಂಗು ಕೆರೆಯನ್ನು ನಿರ್ಮಿಸುವುದು ಕಾರ್ಯಸಾಧ್ಯವಾಗಿರುವುದಿಲ್ಲ. ಆದುದರಿಂದ ನದಿಗಳಿಗೆ ಸಣ್ಣ ರಚನೆಗಳಾದ ಕಿಂಡಿ ಅಣೆಕಟ್ಟುಗಳನ್ನು ನದಿಗೆ ಅಡ್ಡಲಾಗಿ ನಿರ್ಮಿಸಿ ನದಿಯ ದಂಡೆವರೆಗೆ ನೀರನ್ನು ಶೇಖರಿಸಬಹುದಾಗಿದೆ. ಇದರಿಂದಾಗಿ ಯಾವುದೇ ಪ್ರದೇಶದ ಮುಳುಗಡೆ ಭೀತಿ ಇರುವುದಿಲ್ಲ. ನದಿಯಲ್ಲಿ ನೀರಿನ ಹರಿವಿನ ಪ್ರಮಾಣ ಕಡಿಮೆಯಾದಾಗ ಸಮುದ್ರದಲ್ಲಿನ ಉಬ್ಬರದಿಂದಾಗಿ ಸಮುದ್ರದ ಉಪ್ಪು ನೀರು ನದಿಯ ಹಿಮ್ಮುಖವಾಗಿ ಬಂದು ಸಿಹಿನೀರನ್ನು ಬೆರೆಯುವುದರೊಂದಿಗೆ ಸುತ್ತಮುತ್ತಲಿನ ಬಾವಿ, ಭೂಮಿಯನ್ನು ಲವಣಯುಕ್ತಗೊಳಿಸುತ್ತದೆ. ಇದನ್ನು ತಪ್ಪಿಸುವ ಸಲುವಾಗಿ ಉಪ್ಪು ನೀರು ತಡೆ ಅಣೆಕಟ್ಟುಗಳನ್ನು ನಿರ್ಮಿಸಿ ಸಮುದ್ರದ ನೀರು ಉಪ್ಪು ನೀರಿನೊಂದಿಗೆ ಬೆರೆಯುವುದನ್ನು ತಪ್ಪಿಸುವುದರೊಂದಿಗೆ ಕೃಷಿ ಭೂಮಿಗೆ ಸಿಹಿ ನೀರಿನ ಸೌಲಭ್ಯ ದೊರಕುವುದರೊಂದಿಗೆ ಭೂಮಿ ಲವಣಯುಕ್ತವಾಗುವುದನ್ನು ತಪ್ಪಿಸಲು ಸಾಧ್ಯವಾಗುತ್ತದೆ. ಕಿಂಡಿ ಅಣೆಕಟ್ಟುಗಳು ಹಲವಾರು ಕಿಂಡಿಗಳನ್ನು ಹೊಂದಿದ್ದು, ಮಳೆಗಾಲದಲ್ಲಿ ನೀರಿನ ಸ್ವಾಭಾವಿಕ ಹರಿವಿಗೆ ಯಾವುದೇ ಅಡಚಣೆಯಾಗದಂತೆ ಕಿಂಡಿಗಳನ್ನು ತೆರೆದಿಡಲಾಗುತ್ತದೆ. ಮಳೆಗಾಲದ ನಂತರ ಕಿಂಡಿಗಳಿಗೆ ಹಲಗೆ/ಎಫ್.ಆರ್.ಪಿ./ಸ್ಟೀಲ್ ಗೇಟ್‌ಗಳನ್ನು ಅಳವಡಿಸಿ ನದಿಯ ದಂಡೆಯ ಮಟ್ಟದವರೆಗೆ ನೀರನ್ನು ಶೇಖರಿಸುವುದರೊಂದಿಗೆ ಅಂತರ್ಜಲ ಮಟ್ಟ ಹೆಚ್ಚಿಸಲು ಸಹಕಾರಿಯಾಗುತ್ತದೆ.

ಅದರಂತೆ, ಸಣ್ಣ ನೀರಾವರಿ ಇಲಾಖೆಯಿಂದ ಪ್ರಸ್ತುತ ಸಾಲಿನಲ್ಲಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ 478 ಕಿಂಡಿ ಅಣೆಕಟ್ಟು/ಉಪ್ಪು ನೀರು ತಡೆಅಣೆಕಟ್ಟುಗಳನ್ನು ನಿರ್ವಹಿಸಲಾಗುತ್ತಿದ್ದು, ಸುಮಾರು 2125.33 ಎಂ.ಸಿ.ಎಫ್.ಟಿ ನೀರನ್ನು ಶೇಖರಿಸಲು ಹಾಗೂ ಉಡುಪಿ ಜಿಲ್ಲೆಯಲ್ಲಿ 691 ಕಿಂಡಿ ಅಣೆಕಟ್ಟು/ಉಪ್ಪು ನೀರು ತಡೆ ಅಣೆಕಟ್ಟುಗಳನ್ನು ನಿರ್ವಹಿಸಲಾಗುತ್ತಿದ್ದು, ಸುಮಾರು 3728.49 ಎಂ.ಸಿ.ಎಫ್.ಟಿ ನೀರನ್ನು ಹಾಗೂ ಉತ್ತರ ಕನ್ನಡ ಜಿಲ್ಲೆಯಲ್ಲಿ 91 ಕೆರೆಗಳು 517 ಕಿಂಡಿ ಅಣೆಕಟ್ಟುಗಳನ್ನು ನಿರ್ವಹಿಸಲಾಗುತ್ತಿದ್ದು, ಸುಮಾರು 2766.80 ಎಂ.ಸಿ.ಎಫ್.ಟಿ ನೀರನ್ನು ಶೇಖರಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.

ಪ್ರತಿ ವರ್ಷ ನವೆಂಬರ್/ಡಿಸೆಂಬರ್‌ನಲ್ಲಿ ನದಿಗಳಲ್ಲಿ ನೀರಿನ ಹರಿವು ಕಡಿಮೆಯಾದಾಗ ಕಿಂಡಿಅಣೆಕಟ್ಟುಗಳಿಗೆ ಗೇಟುಗಳನ್ನು ಅಳವಡಿಸಲಾಗುತ್ತದೆ. ಆದರೆ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಜನವರಿಯಿಂದ ದಿ: 19.08.2026 ರವರೆಗಿನ ಸರಾಸರಿ ವಾಡಿಕೆ ಮಳೆಯು 3035.90 ಮಿ.ಮೀ. ನಷ್ಟು ಆಗಬೇಕಿದ್ದು, ಪ್ರಸ್ತುತ ಸಾಲಿನಲ್ಲಿ 2216.50 ಮಿ.ಮೀ. ನಷ್ಟು ಆಗಿರುತ್ತದೆ. ಅದೇ ರೀತಿ ಉಡುಪಿ ಜಿಲ್ಲೆಯಲ್ಲಿ ಜನವರಿಯಿಂದ ದಿ: 19.08.2026 ರವರೆಗಿನ ಸರಾಸರಿ ವಾಡಿಕೆ ಮಳೆಯು ಮಿ.ಮೀ. 3512.30 ನಷ್ಟು ಆಗಬೇಕಿದ್ದು, ಪ್ರಸ್ತುತ ಸಾಲಿನಲ್ಲಿ 2498.70 ಮಿ.ಮೀ. ನಷ್ಟು ಆಗಿರುತ್ತದೆ. ಉತ್ತರಕನ್ನಡ ಜಿಲ್ಲೆಯಲ್ಲಿ ದಿನಾಂಕ:01-06-2026 ರಿಂದ ಆಗಸ್ಟ್ ಮಧ್ಯದವರೆಗೆ ಸರಾಸರಿ 2104.50 ಮಿ.ಮೀ. ವಾಡಿಕೆ

ಮಳೆಯಾಗಬೇಕಾಗಿದ್ದು, ವಾಸ್ತವಿಕವಾಗಿ 1582.60 ಮಿ.ಮೀ. ಮಳೆಯಾಗಿದ್ದು, ಪ್ರತಿಶತ 25 ರಷ್ಟು ಕೊರತೆಯಾಗಿರುತ್ತದೆ.

ಮಳೆಯ ಪ್ರಮಾಣ ವಾಡಿಕೆಗಿಂತ ಕಡಿಮೆಯಾಗಿರುವುದರಿಂದ ಮಳೆಯ ಪ್ರಮಾಣ ಅವಲೋಕಿಸಿ, ನೀರಿನ ಒಳಹರಿವು ಗಮನಿಸಿ, ಈ ಸಾಲಿನಲ್ಲಿ ಅಕ್ಟೋಬರ್/ನವೆಂಬರ್ ತಿಂಗಳಲ್ಲಿ ಕಿಂಡಿ ಅಣೆಕಟ್ಟುಗಳಿಗೆ ಗೇಟುಗಳನ್ನು ಅಳವಡಿಸಿ ಕಿಂಡಿ ಅಣೆಕಟ್ಟುಗಳಲ್ಲಿ ಗರಿಷ್ಠ ನೀರಿನ ಮಟ್ಟದವರೆಗೆ ನೀರನ್ನು ಶೇಖರಿಸಲಾಗುವುದು.

ಎಲ್ ನಿನೋ-ಲಾ ನಿನಾ ಸೇರಿದಂತೆ ಹವಾಮಾನ ವೈಪರೀತ್ಯದ ಹಿನ್ನೆಲೆಯಲ್ಲಿ ಮುಂಜಾಗ್ರತಾ ಕ್ರಮವಾಗಿ ಹವಾಮಾನ ಮತ್ತು ಕಂದಾಯ ಇಲಾಖೆಯೊಂದಿಗೆ ಸಮನ್ವಯತೆ ಸಾಧಿಸಿಕೊಂಡು ಸೂಕ್ತ ಸಮಯದಲ್ಲಿ ಕಿಂಡಿ ಅಣೆಕಟ್ಟುಗಳಿಗೆ ಗೇಟ್ ಅಳವಡಿಸುವ ಮೂಲಕ ನಿಗಧಿತ ನೀರು ಸಂಗ್ರಹಿಸಲು ಕ್ರಮ ವಹಿಸಲಾಗುವುದು.

**ಕಡತ ಸಂಖ್ಯೆ:MID/76/LCQ/2026**

(ಡಾ. ಅಜಯ್ ಧರ್ಮಸಿಂಗ್)
ಸಣ್ಣ ನೀರಾವರಿ, ವಿಜ್ಞಾನ ಮತ್ತು ತಂತ್ರಜ್ಞಾನ
ಸಚಿವರು.

**Comparison of Static Groundwater Levels: July 2025 and July 2026**

| Sl No | District | Taluk | BW/D | July-2025 | July-2026 | Flucation | Ranges |
|---|---|---|---|---|---|---|---|
| 1 | Dakshina Kannad | Bantwal | BW | 5.37 | 7.57 | -2.20 | 2-4 Fall |
| 2 | Dakshina Kannad | Beltangadi | BW | 13.06 | 11.23 | 1.83 | 0-2 Rise |
| 3 | Dakshina Kannad | Kadaba | BW | 7.18 | 6.62 | 0.56 | 0-2 Rise |
| 4 | Dakshina Kannad | Mangaluru | BW | 21.14 | 21.21 | -0.07 | 0-2 Fall |
| 5 | Dakshina Kannad | Mudabidri | BW | 23.05 | 21.90 | 1.15 | 0-2 Rise |
| 6 | Dakshina Kannad | Mulki | BW | 5.78 | 6.68 | -0.90 | 0-2 Fall |
| 7 | Dakshina Kannad | Puttur | BW | 10.35 | 12.93 | -2.58 | 2-4 Fall |
| 8 | Dakshina Kannad | Sulya | BW | 8.87 | 9.31 | -0.44 | 0-2 Fall |
| 9 | Dakshina Kannad | Ullala | BW | 10.57 | 20.89 | -10.32 | > 4 Fall |
| 10 | Udupi | Bramhavara | BW | 5.18 | 9.71 | -4.53 | > 4 Fall |
| 11 | Udupi | Bynduru | BW | 4.85 | 6.23 | -1.38 | 0-2 Fall |
| 12 | Udupi | Hebri | BW | 3.38 | 7.07 | -3.69 | 2-4 Fall |
| 13 | Udupi | Kapu | BW | 2.97 | 5.26 | -2.29 | 2-4 Fall |
| 14 | Udupi | Karkala | BW | 4.65 | 7.14 | -2.49 | 2-4 Fall |
| 15 | Udupi | Kundapur | BW | 5.72 | 7.15 | -1.43 | 0-2 Fall |
| 16 | Udupi | Udupi | BW | 2.70 | 4.28 | -1.58 | 0-2 Fall |
| 17 | Uttara Kannada | Ankola | BW | 3.66 | 5.78 | -2.12 | 2-4 Fall |
| 18 | Uttara Kannada | Bhatkal | BW | 2.20 | 4.31 | -2.11 | 2-4 Fall |
| 19 | Uttara Kannada | Dandelli | BW | 5.18 | 8.18 | -3.00 | 2-4 Fall |
| 20 | Uttara Kannada | Haliyal | BW | 9.78 | 15.34 | -5.56 | > 4 Fall |
| 21 | Uttara Kannada | Honnavar | BW | 7.67 | 7.74 | -0.07 | 0-2 Fall |
| 22 | Uttara Kannada | Karwar | BW | 1.52 | 2.34 | -0.82 | 0-2 Fall |
| 23 | Uttara Kannada | Kumta | BW | 1.67 | 2.52 | -0.85 | 0-2 Fall |
| 24 | Uttara Kannada | Mundgod | BW | 1.00 | 8.02 | -7.02 | > 4 Fall |
| 25 | Uttara Kannada | Siddapur | BW | 7.72 | 8.34 | -0.62 | 0-2 Fall |
| 26 | Uttara Kannada | Sirsi | BW | 4.60 | 5.16 | -0.56 | 0-2 Fall |
| 27 | Uttara Kannada | Supa | BW | 1.89 | 4.53 | -2.64 | 2-4 Fall |
| 28 | Uttara Kannada | Yellapur | BW | 6.30 | 8.81 | -2.51 | 2-4 Fall |

| | |
|---|---|
| **Rise** | **3** |
| **Fall** | **25** |

| Ranges | Taluks |
|---|---|
| 0-2 Rise | 3 |
| 0-2 Fall | 11 |
| 2-4 Fall | 10 |
| > 4 Fall | 4 |
| Total | 28 |

## Decadal Static Groundwater level Fluctuation ( Mean of July 2016-2025 - July 2026) (In mbgl)

| Sl No | District | Taluk | /DW | July-2016 | July-2017 | July-2018 | July-2019 | July-2020 | July-2021 | July-2022 | July-2023 | July-2024 | July-2025 | July-2026 | Mean of 10yrs | Flucation | Ranges |
|---|---|---|---|---|---|---|---|---|---|---|---|---|---|---|---|---|---|
| 1 | Dakshina Kannad | Bantwal | BW | 4.59 | 10.90 | 5.88 | 9.68 | 10.02 | 4.18 | 12.28 | 4.15 | 8.00 | 5.37 | 7.57 | 7.51 | -0.06 | 0-2 Fall |
| 2 | Dakshina Kannad | Beltangadi | BW | 9.34 | 14.34 | 14.85 | 18.76 | 12.27 | 13.81 | 11.47 | 11.54 | 11.11 | 13.06 | 11.23 | 13.05 | 1.82 | 0-2 Rise |
| 3 | Dakshina Kannad | Kadaba | BW | 2.65 | 1.10 | 5.56 | 8.74 | 9.33 | 6.77 | 6.30 | 4.98 | 6.22 | 7.18 | 6.62 | 5.88 | -0.74 | 0-2 Fall |
| 4 | Dakshina Kannad | Mangaluru | BW | 8.38 | 7.33 | 21.92 | 25.91 | 20.82 | 23.67 | 21.77 | 23.33 | 17.44 | 21.14 | 21.21 | 19.17 | -2.04 | 2-4 Fall |
| 5 | Dakshina Kannad | Mudabidri | BW | 14.79 | 21.20 | 21.80 | 18.59 | 22.23 | 18.31 | 17.86 | 20.55 | 26.30 | 23.05 | 21.90 | 20.47 | -1.43 | 0-2 Fall |
| 6 | Dakshina Kannad | Mulki | BW | | | | 9.87 | 14.05 | 6.95 | 4.48 | 5.53 | 6.28 | 5.78 | 6.68 | 7.56 | 0.88 | 0-2 Rise |
| 7 | Dakshina Kannad | Puttur | BW | 6.70 | 10.30 | 8.86 | 14.94 | 12.03 | 9.65 | 9.64 | 9.82 | 10.20 | 10.35 | 12.93 | 10.25 | -2.68 | 2-4 Fall |
| 8 | Dakshina Kannad | Sulya | BW | 9.34 | 8.18 | 7.64 | 12.74 | 8.79 | 8.64 | 9.73 | 9.52 | 9.69 | 8.87 | 9.31 | 9.31 | 0.00 | 0-2 Rise |
| 9 | Dakshina Kannad | Ullala | BW | 8.81 | 23.76 | 23.01 | 23.66 | 27.81 | 26.81 | 27.84 | 9.04 | 9.22 | 10.57 | 20.89 | 19.05 | -1.84 | 0-2 Fall |
| 10 | Udupi | Bramhavara | BW | 2.64 | 2.19 | 2.95 | 7.77 | 1.99 | 1.64 | 2.40 | 3.79 | 1.83 | 5.18 | 9.71 | 3.24 | -6.47 | > 4 Fall |
| 11 | Udupi | Bynduru | BW | 5.28 | 3.62 | 5.17 | 4.55 | 4.50 | 4.22 | 5.06 | 4.19 | 4.18 | 4.85 | 6.23 | 4.56 | -1.67 | 0-2 Fall |
| 12 | Udupi | Hebri | BW | 3.79 | 2.49 | 2.74 | 3.59 | 3.19 | 2.15 | 2.47 | 3.79 | 3.40 | 3.38 | 7.07 | 3.10 | -3.97 | 2-4 Fall |
| 13 | Udupi | Kapu | BW | 3.34 | 4.49 | 7.49 | 9.04 | 4.19 | 2.34 | 4.27 | 5.12 | 4.62 | 2.97 | 5.26 | 4.79 | -0.47 | 0-2 Fall |
| 14 | Udupi | Karkala | BW | 3.36 | 3.60 | 3.76 | 3.63 | 4.00 | 3.43 | 5.21 | 5.70 | 4.69 | 4.65 | 7.14 | 4.20 | -2.94 | 2-4 Fall |
| 15 | Udupi | Kundapur | BW | 6.06 | 3.95 | 3.95 | 7.48 | 6.49 | 6.30 | 6.29 | 6.72 | 6.40 | 5.72 | 7.15 | 5.94 | -1.21 | 0-2 Fall |
| 16 | Udupi | Udupi | BW | 4.09 | 5.07 | 4.67 | 7.13 | 5.28 | 4.73 | 3.98 | 4.15 | 3.08 | 2.70 | 4.28 | 4.49 | 0.21 | 0-2 Rise |
| 17 | Uttara Kannada | Ankola | BW | 4.18 | 4.35 | 4.69 | 5.61 | 2.51 | 2.67 | 3.60 | 4.77 | 3.54 | 3.66 | 5.78 | 3.96 | -1.82 | 0-2 Fall |
| 18 | Uttara Kannada | Bhatkal | BW | 3.39 | 3.50 | 3.99 | 3.49 | 2.38 | 2.64 | 3.13 | 3.51 | 2.75 | 2.20 | 4.31 | 3.10 | -1.21 | 0-2 Fall |
| 19 | Uttara Kannada | Dandelli | BW | 11.18 | 11.94 | 8.59 | 11.49 | 9.58 | 5.83 | 4.78 | 10.62 | 3.68 | 5.18 | 8.18 | 8.29 | 0.11 | 0-2 Rise |
| 20 | Uttara Kannada | Haliyal | BW | 15.75 | 22.24 | 10.84 | 17.92 | 20.63 | 11.04 | 9.96 | 24.61 | 11.90 | 9.78 | 15.34 | 15.47 | 0.13 | 0-2 Rise |
| 21 | Uttara Kannada | Honnavar | BW | 7.65 | 7.74 | 8.00 | 7.51 | 6.19 | 5.93 | 7.22 | 7.40 | 7.05 | 7.67 | 7.74 | 7.24 | -0.50 | 0-2 Fall |
| 22 | Uttara Kannada | Karwar | BW | 2.40 | 1.73 | 3.30 | 2.33 | 1.29 | 1.58 | 1.84 | 2.51 | 2.41 | 1.52 | 2.34 | 2.09 | -0.25 | 0-2 Fall |
| 23 | Uttara Kannada | Kumta | BW | 2.74 | 2.62 | 2.63 | 3.17 | 2.29 | 2.27 | 1.23 | 2.25 | 1.48 | 1.67 | 2.52 | 2.24 | -0.29 | 0-2 Fall |
| 24 | Uttara Kannada | Mundgod | BW | 5.98 | 5.42 | 2.79 | 11.47 | 2.86 | 3.45 | 1.00 | 2.80 | 0.75 | 1.00 | 8.02 | 3.75 | -4.27 | > 4 Fall |
| 25 | Uttara Kannada | Siddapur | BW | 10.15 | 9.19 | 7.76 | 9.60 | 9.94 | 8.08 | 6.25 | 9.10 | 6.15 | 7.72 | 8.34 | 8.39 | 0.05 | 0-2 Rise |
| 26 | Uttara Kannada | Sirsi | BW | 6.15 | 3.70 | 1.74 | 5.65 | 4.88 | 4.02 | 3.72 | 6.03 | 3.56 | 4.60 | 5.16 | 4.41 | -0.76 | 0-2 Fall |
| 27 | Uttara Kannada | Supa | BW | 3.57 | 0.76 | 1.82 | 6.01 | 5.40 | 3.53 | 1.71 | 4.99 | 1.15 | 1.89 | 4.53 | 3.08 | -1.45 | 0-2 Fall |
| 28 | Uttara Kannada | Yellapur | BW | 9.34 | 5.65 | 4.92 | 10.86 | 7.88 | 7.67 | 7.08 | 7.76 | 5.19 | 6.30 | 8.81 | 7.27 | -1.55 | 0-2 Fall |

**Rise** 7
**Fall** 21

| Ranges | Taluks |
|---|---|
| 0-2 Rise | 7 |
| 0-2 Fall | 15 |
| 2-4 Fall | 4 |
| > 4 Fall | 2 |
| Total | 28 |

ಅನುಬಂಧ- 3

**Stage of Ground Water Extraction of GWRE and Categorization 2024 and 2025 ( In Percentage)**

| SL.No | District | Taluk | Stage of Ground Water ( In Percentage) | | Categorization of Assessment Unit | |
|---|---|---|---|---|---|---|
| | | | 2024 | 2025 | 2024 | 2025 |
| 1 | Dakshina Kannada | Bantwal | 51.79 | 53.34 | Safe | Safe |
| 2 | Dakshina Kannada | Belthangady | 45.24 | 46.59 | Safe | Safe |
| 3 | Dakshina Kannada | Kadaba | 34.78 | 38.32 | Safe | Safe |
| 4 | Dakshina Kannada | Mangalore | 47.26 | 48.57 | Safe | Safe |
| 5 | Dakshina Kannada | Mudabidri | 38.72 | 39.71 | Safe | Safe |
| 6 | Dakshina Kannada | Mulki | 41.27 | 39.89 | Safe | Safe |
| 7 | Dakshina Kannada | Puttur | 39.04 | 39.90 | Safe | Safe |
| 8 | Dakshina Kannada | Sulya | 52.21 | 53.74 | Safe | Safe |
| 9 | Dakshina Kannada | Ullala | 33.85 | 32.98 | Safe | Safe |
| 10 | Udupi | Bramhavara | 43.96 | 40.31 | Safe | Safe |
| 11 | Udupi | Bynduru | 36.41 | 34.62 | Safe | Safe |
| 12 | Udupi | Hebri | 58.22 | 54.22 | Safe | Safe |
| 13 | Udupi | Kapu | 32.80 | 32.25 | Safe | Safe |
| 14 | Udupi | Karkala | 29.54 | 28.60 | Safe | Safe |
| 15 | Udupi | Kundapur | 24.58 | 23.61 | Safe | Safe |
| 16 | Udupi | Udupi | 34.94 | 33.83 | Safe | Safe |
| 17 | Uttara Kannada | Ankola | 60.51 | 57.34 | Safe | Safe |
| 18 | Uttara Kannada | Bhatkal | 34.50 | 33.34 | Safe | Safe |
| 19 | Uttara Kannada | Dandelli | 11.90 | 11.14 | Safe | Safe |
| 20 | Uttara Kannada | Haliyal | 53.95 | 50.74 | Safe | Safe |
| 21 | Uttara Kannada | Honnavar | 39.31 | 36.31 | Safe | Safe |
| 22 | Uttara Kannada | Joida | 16.05 | 14.50 | Safe | Safe |
| 23 | Uttara Kannada | Karwar | 61.92 | 58.77 | Safe | Safe |
| 24 | Uttara Kannada | Kumta | 23.52 | 20.50 | Safe | Safe |
| 25 | Uttara Kannada | Mundgod | 31.77 | 28.37 | Safe | Safe |
| 26 | Uttara Kannada | Siddapur | 23.71 | 24.65 | Safe | Safe |
| 27 | Uttara Kannada | Sirsi | 27.07 | 26.14 | Safe | Safe |
| 28 | Uttara Kannada | Yellapur | 22.59 | 22.03 | Safe | Safe |